**ಅಸಲು ದಾವಾ ನಂಃ 110/2017**
**ಪಿ.ಡಬ್ಲ್ಯೂಃ1 ,**

**ದಿನಾಂಕ :13-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ. ಎಸ್. ಎಸ್.ಎ. ವಾದಿ ಪರ ವಕೀಲರಿಂದ :**

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

At the stage the counsel for defendant has raised objection to mark original sale deed. Any objection raised may be considered at the stage of final hearing. Hence the objection is overruled.

Sale deed dated 27-07-1997 marked as ExP-21.

Mutations marked as ExP-22

Prays to decree to the suit.

**ಪಾಟಿ ಸವಾಲು: ಶ್ರೀ. ಜಿ.ಜಿ.ಕೆ. ಪ್ರತಿವಾದಿ ಪರ ವಕೀಲರಿಂದ :**

ನಮ್ಮ ಅಜ್ಜಿ ಗುಂಡಮ್ಮನಿಗೆ ಆತನ ಗಂಡನಿಂದ ಸರ್ವೆ ನಂಬರ . 10 ಮತ್ತು 11 ಜಮೀನುಗಳು ಬಂದಿವೆ. ಬೇರೆ ಯಾವ ಆಸ್ತಿ ಬಂದಿಲ್ಲಾ. ನಮ್ಮ ಅಜ್ಜಿಯ ಗಂಡ ಅಪ್ಪರಾವ ಇತನಿಗೆ ಇಬ್ಬರು ಹೆಂಡತಿಯರು, ಮೊದಲನೇ ಹೆಂಡತಿ ಗುಂಡಮ್ಮ, ಎರಡನೇ ಹೆಂಡತಿ ಗುಂಡಮ್ಮ, ಮೂರನೆ ಹೆಂಡತಿ ಹಾಲಮ್ಮ, ಸಾಕ್ಷಿ ಮುಂದುವರೆದು ನಮ್ಮ ಅಜ್ಜಿ 2ನೇ ಹೆಂಡತಿ ಗುಂಡಮ್ಮ. ನಮ್ಮ ಅಜ್ಜಿ ಗುಂಡಮ್ಮ ತೀರಿ ಕೊಳ್ಳುವ ಸಮಯದಲ್ಲಿ ಅವರಿಗೆ ವಯಸ್ಸು 79-80 ವರ್ಷ ಇತ್ತು. ನಮ್ಮ ಅಜ್ಜಿ ತೀರಿಕೊಳ್ಳುವ ಸಮಯದಲ್ಲಿ ಅವರಿಗೆ 90 ವರ್ಷ ಹತ್ತಿರ ಇತ್ತು ಎಂದರೆ ಸರಿಯಲ್ಲ.

ಪಿ.ಡಬ್ಲ್ಯೂ:1 ,

ನಮ್ಮ ತಂದೆ ಜೀವಂತ ಸಮಯದಲ್ಲಿ ಸ.ನ. 10 ರಲ್ಲಿ 4 ಎಕರೆ ಭೂ ಪರಿವರ್ತನೆ ಮಾಡಿ ಪ್ಲಾಟ ಹಾಕಿದ್ದರು ಎಂದರೆ ಸರಿ. 2ನೇ ಪ್ರತಿವಾದಿ ಗಂಡನ ಹೆಸರು ಶಿವನಪ್ಪ ಅಲಿಯಾಸ ಶಿವನಗೌಡಾ. ನಮ್ಮ ತಂದೆ ಮುಂದೆ 2ನೇ ಪ್ರತಿವಾದಿ ಗಂಡ ಸ.ನ. 10 ಮತ್ತು 11 ತನಗೆ ಬೇಕು ಎಂದು ಮೇಲಿಂದ ಮೇಲೆ ಹೇಳುತ್ತಿದ್ದರು ಎಂದರೆ ಸರಿಯಲ್ಲ . ಸ.ನ. 10 ಮತ್ತು 11 ಶಿವನಪ್ಪ ಅಲಿಯಾಸ ಶಿವನಗೌಡಾ ಇವರು ತೆಗೆದುಕೊಳ್ಳುವ ತಪ್ಪಿಸಲು ನಮ್ಮ ತಂದೆ ಅವಕಾಶಕ್ಕಾಗಿ ಕಾಯುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-20 ಮತ್ತು 21 ಮಾಡುವಾಗ ಸಮಯದಲ್ಲಿ ಗುಂಡಮ್ಮ ಇವರನ್ನು ಖರಿದಿ ಮಾಡಿಸುತ್ತೇವೆ ಎಂದು ಹೇಳಿ ಅವರ ಮುಖಾಂತರ ವಿಲ್ ನಾಮೆಯನ್ನು ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಗುಂಡಮ್ಮ ಇವರಿಗೆ ನನಗೆ ವಿಲ್ ನಾಮೆ ಬರೆದುಕೊಡುವ ಯಾವುದೇ ಉದ್ದೇಶ ಇರಲಿಲ್ಲಾ ಎಂದರೆ ಸರಿಯಲ್ಲ. ಗುಂಡಮ್ಮ ಇವರಿಗೆ ಮೋಸ ಮತ್ತು ವಂಚನೆ ಮಾಡಿ ನಮ್ಮ ಹೆಸರಿಗೆ ವಿಲ್ ನಾಮೆ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಿಲ್ ನಾಮೆ ನನ್ನ ಹೆಸರಿಗೆ ಬರೆಯುವಾಗ ನನಗೆ 19 ವರ್ಷ ವಯಸ್ಸು ಇತ್ತು . ಸದರಿ ವಿಲ್ ನ್ನ್ ಮೋಸ ಮತ್ತು ವಂಚನೆ ಯಿಂದ ಬರೆದ ಕಾರಣ 1997 ರಲ್ಲಿ ಬರೆದ ಎನ್ನಲಾದ ವಿಲ್ ನಾಮೆಯನ್ನು 2017 ವರೆಗೆ ಹೊರಗೆ ಬರಲಿಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಶಿವನಪ್ಪನಿಗೆ ಬೇಕು ಎಂದು ಹೇಳಿದ ಕಾರಣ ಆತ ತೀರಿಕೊಳ್ಳುವ ವರೆಗೆ ವಿಲ್ ನಾಮೆಯನ್ನು ಹೊರಗೆ ತಂದಿಲ್ಲಾ ಆತ 2001 ರಲ್ಲಿ ತೀರಿ ಕೊಂಡ ನಂತರ ಮೊಸ ಮತ್ತು ವಂಚನೆ ಇಂದ ವಿಲ್ ನಾಮೆಯನ್ನು ಹೊರಗೆ ತಂದಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸ.ನ. 10 ಮತ್ತು 11 ನಮ್ಮ ತಂದೆ 1ನೇ ಪ್ರತಿವಾದಿ ಗಂಡನಿಗೆ ಕೊಡಬೇಕು ಎಂದು ಉದ್ದೇಶ ಇಟ್ಟುಕೊಂಡಿದ್ದರು ಎಂದರೆ

ಸರಿಯಲ್ಲ . ಗುಂಡಮ್ಮ ಇವರು ವಿಲ್ ನಾಮೆಯನ್ನು ಬರೆದು ಕೊಡದ ಕಾರಣ ಅವರು 2008-09 ರಲ್ಲಿ ದಾವಾ ಆಸ್ತಿಯನ್ನು 1ನೇ ಪ್ರತಿವಾದಿ ಗಂಡ ಅಪ್ಪಾಸಾಬನಿಗೆ ಹ್ಕಕು ಬದಲಾವಣೆ ಮುಖಾಂತರ ದಾವಾ ಆಸ್ತಿಯನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಗಂಡನ ಹೆಸರಿಗೆ ದಾವಾ ಆಸ್ತಿಯನ್ನು ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ 2 ಮತ್ತು 3ನೇ ಪ್ರತಿವಾದಿ ಸಮ್ಮತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ಬದಲಾವಣೆಗೆ ನಮ್ಮ ತಂದೆ ಜಯಶಂಕರ ಇವರ ಸಮ್ಮತಿ ಇತ್ತು ಎಂದರೆ ಸರಿಯಲ್ಲ. ಅಪ್ಪಾಸಾಬ ನನಗೆ ತಮ್ಮ ಆಗಬೇಕು. ಅಪ್ಪಸಾಬ ಇವರು 1ನೇ ಪ್ರತಿವಾದಿ ಗಂಡ. 1ನೇ ಪ್ರತಿವಾದಿ ಗಂಡ ಮದುವೆ ಆದ 6 ತಿಂಗಳ ನಂತರ ತೀರಿ ಹೋದರು ಎಂದರೆ ಸರಿಯಲ್ಲ. ಅಪ್ಪಾಸಾಬ ಹೆಸರಿನಲ್ಲಿರುವ ಆಸ್ತಿಯನ್ನು ಆತ ತೀರಿ ಹೋದ ನಂತರ ಆತನ ಹೆಂಡತಿ 1ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಕೊಳ್ಳುತ್ತಾರೆ ಎಂದು ನನಗೆ ಮತ್ತು ನನ್ನ ತಂದೆ ತೊಂದರೆ ಆಗುತ್ತದೆ ಅಂತಾ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಪ್ಪಾಸಾಬನಿಗೆ ಹೋಗಲು ನನಗೆ ಮತ್ತು ನನ್ನ ತಂದೆಗೆ ಮಂಜೂರು ಇತ್ತು ಆದರೆ ಆತ ತೀರಿ ಹೋದ ನಂತರ 1ನೇ ಪ್ರತಿವಾದಿಗೆ ಹೋಗುತ್ತದೆ ಎಂದು ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ . ನಿಪಿ-1 ವಿಲ್ ನಾಮೆ ನಾನು ಮತ್ತು ನನ್ನ ತಂದೆ ಸೃಷ್ಟಿಸಿದ್ದೇವೆ ಸದರಿ ವಿಲ್ ನಾಮೆ ಗುಂಡಮ್ಮ ಇವರ ವಿಲ್ ನಾಮೆ ಅಲ್ಲಾ ಎಂದರೆ ಸರಿಯಲ್ಲ. ದಿ: 21-07-1997 ರಂದು ಖರಿದಿ ಪತ್ರ ಬರೆದುಕೊಡುವ ಸಮಯದಲ್ಲಿ ಗುಂಡಮ್ಮ ಇವರಿಗೆ ತಿಳಿಯಲಾಗದೆ ನಾನು ಮತ್ತು ನನ್ನ ತಂದೆ ವಿಲ್ ನಾಮೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-21

ತಿಮ್ಮಯ್ಯಾ ಪೂಜಾರಿ ನೀಡಿದ್ದಾರೆ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**